**ವ್ಯವಹಾರಿಕ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂಡಾಧಿಕಾರಿಯವರ ನ್ಯಾಯಾಲಯ, ಸುಳ್ಯ, ದ.ಕ. ಇವರ ನ್ಯಾಯಾಲಯದಲ್ಲಿ –**

**ಸಿ.ಸಿ.ನಂ. 276/2022**
**ಸಿ.ಡಬ್ಲ್ಯೂ–5**
**ಪಿ.ಡಬ್ಲೂ –4**

ಸಾಕ್ಷಿದಾರರ ಹೆಸರು : ಜಯರಾಮ ಶೆಟ್ಟಿ

ತಂದೆಯ ಹೆಸರು : ದಿವಂಗತ ಸಂಜೀವ ಶೆಟ್ಟಿ

ವಯಸ್ಸು : 51 ವರ್ಷ

ಉದ್ಯೋಗ : ಅಂಚೆ ಅಧೀಕ್ಷಕರು , ಶಿವಮೊಗ್ಗ

ವಾಸ : ಉಡುಪಿ.

ದಿನಾಂಕ : 10-01-2025.

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

## ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ

ನಾನು ದಿನಾಂಕ 16-09-2004 ರಿಂದ ಮೇ ತಿಂಗಳ 2008 ನೇ ಇಸವಿಯವರೆಗೆ ಸುಳ್ಯ ಉಪ ಅಂಚೆ ವಿಭಾಗದಲ್ಲಿ ಅಂಚೆ ನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ಸುಳ್ಯದಲ್ಲಿ ನನ್ನ ಕರ್ತವ್ಯದ ಪೂರ್ವದಲ್ಲಿ ಚಾ.ಸಾ.1 ರವರು ಅಂಚೆ ನಿರೀಕ್ಷಕರಾಗಿ ಕರ್ತವ್ಯವನ್ನು ನಿರ್ವಹಿಸಿರುತ್ತಾರೆ. ಆರೋಪಿಯು ಮರ್ಕಂಜ ಅಂಚೆ ಕಚೇರಿಯಲ್ಲಿ ಶಾಖಾ ಪೋಸ್ಟ್ ಮಾಸ್ಟರ್ ಆಗಿ ಕೆಲಸ ಮಾಡುತ್ತಿದ್ದರು. ಆರೋಪಿಯು ಸದರಿ ಕಚೇರಿಯಲ್ಲಿ ಕೆಲಸ ಮಾಡುತ್ತಿದ್ದ ಸಮಯದಲ್ಲಿ ಸಾರ್ವಜನಿಕರಿಂದ ಎಸ್.ಬಿ. , ಆರ್.ಡಿ. ಖಾತೆಗಳಿಗೆ ಸಾರ್ವಜನಿಕರಿಂದ ಠೇವಣಿಯನ್ನು ಸಂಗ್ರಹಿಸಿ ಪಾಸ್ ಪುಸ್ತಕದಲ್ಲಿ ನಮೂದಿಸಿ, ಹಣವನ್ನು ಅಂಚೆ ಇಲಾಖೆಗೆ ಜಮಾ ಮಾಡದೇ ದುರುಪಯೋಗ

ಸಾಕ್ಷಿಯ ಸಹಿ ನ್ಯಾಯಾಧೀಶರ ಸಹಿ

ಮಾಡಿರುವ ಕುರಿತು ಚಾ.ಸಾ.1 ರವರು ಸುಳ್ಯ ಪೊಲೀಸ್ ಠಾಣೆಗೆ ಆರೋಪಿಯ ವಿರುದ್ಧ ಪಿರ್ಯಾದಿಯನ್ನು ನೀಡಿರುತ್ತಾರೆ.

ಈ ಕುರಿತಂತೆ ಸುಳ್ಯ ಠಾಣಾಧಿಕಾರಿಯಾಗಿರುವ ಚಾ.ಸಾ.11 ರವರು ಆರೋಪಿಯ ಕೈ ಬರಹಗಳು ಇರುವಂತಹ ದಾಖಲೆಗಳನ್ನು ತಜ್ಞರ ಪರಿಶೀಲನೆಗಾಗಿ ಅವಶ್ಯಕತೆ ಇದೆಯೆಂದು ಕೇಳಿರುತ್ತಾರೆ. ಆ ಪ್ರಕಾರವಾಗಿ ನಾನು ಆರೋಪಿಯ ಕೈ ಬರಹಗಳು ಹಾಗೂ ಸಹಿ ಇರುವಂತಹ ನಾಲ್ಕು ಪಾಸ್ ಪುಸ್ತಕಗಳನ್ನು ಚಾ.ಸಾ.11ರವರಿಗೆ ಸುಳ್ಯ ಪೊಲೀಸ್ ಠಾಣೆಗೆ ಹಸ್ತಾಂತರಿಸಿರುತ್ತೇನೆ.

ಸದರಿ ನಾಲ್ಕು ಪಾಸ್ ಪುಸ್ತಕಗಳಲ್ಲಿ ಗಾಯತ್ರಿ, ದಾಮೋದರ ಪಾಟಾಳಿ, ಜಯರಾಮ ಭಟ್ ಮತ್ತು ವೆಂಕಟೇಶ್ ರವರಿಗೆ ಸೇರಿದ ಪಾಸ್ ಪುಸ್ತಕಗಳಾಗಿರುತ್ತವೆ. ಸದರಿಯವರ ಪೈಕಿ ದಾಮೋದರ ಪಾಟಾಳಿಯವರ ಪಾಸ್ ಪುಸ್ತಕವು ಎಸ್.ಬಿ. ಖಾತೆಯದ್ದಾಗಿದ್ದು, ಉಳಿದ ಮೂವರ ಪಾಸ್ ಪುಸ್ತಕವು ಆರ್.ಡಿ.ಖಾತೆಗೆ ಸಂಬಂಧಿಸಿದ್ದಾಗಿರುತ್ತದೆ.

ದಿನಾಂಕ 23-11-2004 ರಂದು ಸದರಿಯವರ ಪಾಸ್ ಪುಸ್ತಕಗಳನ್ನು ಪೊಲೀಸ್ ಠಾಣೆಗೆ ಹಸ್ತಾಂತರಿಸುವ ಸಮಯದಲ್ಲಿ ಚಾ.ಸಾ.11 ರವರು ಸ್ವತ್ತು ಸ್ವಾಧೀನತಾ ಮಹಜರು ಮೂಲಕ ಸ್ವೀಕರಿಸಿಕೊಂಡಿರುತ್ತಾರೆ. ಸದರಿ ಸ್ವತ್ತು ಸ್ವಾಧೀನತಾ ಮಹಜರನ್ನು ಬೆಳಗ್ಗೆ 9.00 ಗಂಟೆಯಿಂದ 9.45 ಗಂಟೆಯವರೆಗೆ ಜರಗಿಸಲಾಗಿರುತ್ತದೆ. ನಾನು ಈಗ ನ್ಯಾಯಾಲಯದಲ್ಲಿ ಸದರಿ ಸ್ವತ್ತು ಸ್ವಾಧೀನತಾ ಮಹಜರನ್ನು

ನೋಡುತ್ತಿದ್ದು, ಅದನ್ನು ಈಗಾಗಲೇ ನಿಪಿ-25 ಎಂದು ನಿಶಾನಿಕರಿಸಿದ್ದು, ಅದರಲ್ಲಿರುವ ನನ್ನ ಸಹಿಯನ್ನು ನಾನು ನೋಡಿ ಒಪ್ಪಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ-25(ಬಿ) ಎಂದು ಗುರುತಿಸಲಾಗಿರುತ್ತದೆ. ನಿಪಿ-25 ನ್ನು ತಯಾರಿಸುವ ಸಮಯದಲ್ಲಿ ಚಾ.ಸಾ.6 ಹಾಗೂ 9 ರವರು ಹಾಜರಿದ್ದರು.

ಸದರಿ ನಾಲ್ಕು ಪಾಸ್ ಪುಸ್ತಕಗಳನ್ನು ನಾನು ಈಗ ನ್ಯಾಯಾಲಯದಲ್ಲಿ ನೋಡುತ್ತಿದ್ದು ಅವುಗಳನ್ನು ಈಗಾಗಲೇ ನಿಪಿ-26 ರಿಂದ ನಿಪಿ-29 ಎಂದು ನಿಶಾನಿಕರಿಸಲಾಗಿರುತ್ತದೆ.

ಈ ಕುರಿತಂತೆ ದಿನಾಂಕ 23-11-2004 ರಂದು ಸುಳ್ಯ ಪೊಲೀಸ್ ಠಾಣೆಯವರಿಗೆ ನಾನು ನನ್ನ ಹೇಳಿಕೆಯನ್ನು ನೀಡಿರುತ್ತೇನೆ. ಸುಳ್ಯ ಠಾಣಾಧಿಕಾರಿಯವರು ಆರೋಪಿಯು ಅಂಚೆ ಕಚೇರಿಯಲ್ಲಿ ಯಾವೆಲ್ಲಾ ಕರ್ತವ್ಯಗಳನ್ನು ನಿರ್ವಹಿಸುತ್ತಾರೆಂದು ಮಾಹಿತಿಯನ್ನು ನನ್ನಲ್ಲಿ ಕೇಳಿದ್ದು, ಈ ಕುರಿತಂತೆ ನಾನು ದಿನಾಂಕ 08-04-2005 ರ ಪತ್ರದ ಮೂಲಕ ಆರೋಪಿಯು ನಿರ್ವಹಿಸುತ್ತಿರುವ ಕೆಲಸಗಳ ಬಗ್ಗೆ ಮಾಹಿತಿಯನ್ನು ನೀಡಿರುತ್ತೇನೆ. ಸದರಿ ಪತ್ರವನ್ನು ನಾನು ಈಗ ನ್ಯಾಯಾಲಯದಲ್ಲಿ ನೋಡುತ್ತಿದ್ದು, ಅದನ್ನು ಈಗಾಗಲೇ ನಿಪಿ-30 ಎಂದು ನಿಶಾನಿಕರಿಸಿದ್ದು, ಅದರಲ್ಲಿರುವ ನನ್ನ ಸಹಿಯನ್ನು ನಾನು ನೋಡಿ ಒಪ್ಪಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ-30(ಎ) ಎಂದು ಗುರುತಿಸಲಾಯಿತು.

ನಿಪಿ-30 ನ್ನು ದಿನಾಂಕ 10-04-2005 ರಂದು ಸುಳ್ಯ ಠಾಣಾಧಿಕಾರಿಯವರಿಗೆ ನೀಡಿರುತ್ತೇನೆ.

ನನಗೆ ಆರೋಪಿಯ ಪರಿಚಯ ಇರುತ್ತದೆ. ಆರೋಪಿಯು ಈ ದಿನ ಗೈರು ಹಾಜರಾಗಿದ್ದು ಅವರನ್ನು ಗುರುತಿಸುವಲ್ಲಿ ಆರೋಪಿ ಪರ ವಕೀಲರು ಯಾವುದೇ ತಗಾದೆ ಎತ್ತಿರುವುದಿಲ್ಲ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎ.ಜೆ.ಎನ್. ವಕೀಲರಿಂದಃ**

ನಾನು ಈಗಲೂ ಸಹ ಶಿವಮೊಗ್ಗದಲ್ಲಿ ಅಂಚೆ ಅಧೀಕ್ಷಕನಾಗಿ ಕರ್ತವ್ಯವನ್ನು ನಿರ್ವಹಿಸುತ್ತಿದ್ದೇನೆ. ಚಾ.ಸಾ.1 ರವರು ಈಗ ಅಂಚೆ ಇಲಾಖೆಯಿಂದ ನಿವೃತ್ತಿಗೊಂಡಿದ್ದು, ನಿಖರವಾಗಿ ಯಾವ ದಿನಾಂಕದಂದು ಅವರು ನಿವೃತ್ತಿಗೊಂಡಿರುತ್ತಾರೆಂದು ನನಗೆ ಈಗ ನೆನಪಿರುವುದಿಲ್ಲ.

ನಾನು ಹಾಗೂ ಚಾ.ಸಾ.1 ರವರು ಎಂದಿಗೂ ಸಂಪರ್ಕದಲ್ಲಿ ಇದ್ದಿರುವುದಿಲ್ಲ. ಚಾ.ಸಾ.1 ರವರು ಅಂಚೆ ಇಲಾಖೆಯಲ್ಲಿ ಕರ್ತವ್ಯದಲ್ಲಿದ್ದ ಸಮಯದಲ್ಲಿ ನನ್ನ ಹಾಗೂ ಚಾ.ಸಾ.1 ರವರ ಕಚೇರಿ ಕೆಲಸದ ಸಂಬಂಧವು ಚೆನ್ನಾಗಿತ್ತು.

ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ವಿಚಾರಗಳನ್ನು ಈ ಪ್ರಕರಣದ ತನಿಖಾಧಿಕಾರಿಯವರ ಬಳಿ ನಾನು ಹೇಳಿರುತ್ತೇನೆ. ತನಿಖಾಧಿಕಾರಿಯವರು ಆರೋಪಿಯ ದಾಖಲೆಗಳನ್ನು ಹಾಜರುಪಡಿಸಲು ನನಗೆ ಲಿಖಿತ ಮನವಿಯನ್ನು ನೀಡಿರುತ್ತಾರೆ. ಸದರಿ ಮನವಿ ದಾಖಲೆಯನ್ನು ನ್ಯಾಯಾಲಯಕ್ಕೆ

ಹಾಜರುಪಡಿಸಿರುತ್ತೇನೋ-ಇಲ್ಲವೋ ಎಂದು ನನಗೆ ಈಗ ತಿಳಿದಿರುವುದಿಲ್ಲ. ಸದರಿ ದಾಖಲೆಯನ್ನು ತನಿಖಾಧಿಕಾರಿಯವರು ನನಗೆ ಖುದ್ದಾಗಿ ನೀಡಿರುತ್ತಾರೆ. ಸದರಿ ದಾಖಲೆಯ ಬಗ್ಗೆ ನನಗೆ ಮಾಹಿತಿ ಇತ್ತು.

ನನ್ನ ಸಮಕ್ಷಮದಲ್ಲಿ ಯಾರಾದರೂ ಬರೆದಿದ್ದ ದಾಖಲೆಗಳು ಇದ್ದಿರಲಿಲ್ಲ. ನನ್ನ ಸಮಕ್ಷಮದಲ್ಲಿ ಆರೋಪಿಯ ಬಾಬ್ತು ದಾಖಲೆಗಳನ್ನು ಯಾರೂ ಬರೆದಿರುವುದಿಲ್ಲ. ನಾನು ಖಾತೆದಾರರಿಂದ ಸಂಗ್ರಹಿಸಿದ ದಾಖಲೆಗಳನ್ನು ನಾನು ತನಿಖಾಧಿಕಾರಿಯವರಿಗೆ ಹಾಜರುಪಡಿಸಿರುತ್ತೇನೆ. ಖಾತೆದಾರರಿಗೆ ದಾಖಲೆಗಳನ್ನು ಹಾಜರುಪಡಿಸುವಂತೆ ಅವರಿಗೆ ನಾನು ನೋಟೀಸನ್ನು ನೀಡಿರುವುದಿಲ್ಲ, ಬದಲಾಗಿ ನಾನು ಅವರಿಂದ ರಶೀದಿಯನ್ನು ಪಡೆದುಕೊಂಡಿರುತ್ತೇನೆ. ಸದರಿ ರಶೀದಿಯು ಅಂಚೆ ಇಲಾಖೆಯ ದಾಖಲೆಯಾದ ಕಾರಣ ನಾನು ನ್ಯಾಯಾಲಯಕ್ಕೆ ಅದನ್ನು ಹಾಜರುಪಡಿಸಿರುವುದಿಲ್ಲ. ಸದರಿ ರಶೀದಿಯು ಪ್ರಸ್ತುತ ಪ್ರಕರಣಕ್ಕೆ ಸಂಬಂಧಪಟ್ಟ ದಾಖಲೆಗಳು ಆಗಿರುತ್ತದೋ-ಇಲ್ಲವೋ ಎಂದು ಹೇಳಲಾಗುವುದಿಲ್ಲ. ನನಗೆ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇದ್ದಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಚಾ.ಸಾ.1 ರವರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಎಲ್ಲಾ ದಾಖಲೆಗಳನ್ನು ಚಾ.ಸಾ.1 ರವರು ತಯಾರಿಸಿದ ದಾಖಲೆಗಳಾಗಿರುತ್ತವೆ ಎಂದರೆ ಸರಿಯಲ್ಲ.

ಪ್ರಸ್ತುತ ಪ್ರಕರಣದ ಸಮಯದಲ್ಲಿ ಮರ್ಕಂಜ ಅಂಚೆ ಕಚೇರಿಯಲ್ಲಿ ಎಷ್ಟು ಜನ ಸಿಬ್ಬಂದಿಗಳು ಹಾಗೂ ಅವರು ನಿರ್ವಹಿಸುತ್ತಿದ್ದ ಕೆಲಸಗಳ ಬಗ್ಗೆ ನನಗೆ ತಿಳಿದಿರುತ್ತದೆ. ಪ್ರಸ್ತುತ ಪ್ರಕರಣದ ಸಮಯದಲ್ಲಿ ಮರ್ಕಂಜ ಅಂಚೆ ಕಚೇರಿಯಲ್ಲಿ ಎರಡು ಜನ ಸಿಬ್ಬಂದಿಗಳು ಇದ್ದು, ಅವರ ಪೈಕಿ ಆರೋಪಿಯು ಶಾಖಾ ಪೋಸ್ಟ್ ಮಾಸ್ಟರ್ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದು, ಇನ್ನೋರ್ವ ಸಿಬ್ಬಂದಿಯಾದ ಜಯರಾಮ ಭಟ್ ರವರು ಅಂಚೆ ವಿತರಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದರು.

ಮರ್ಕಂಜ ಅಂಚೆ ಕಚೇರಿಯಲ್ಲಿ ಎಷ್ಟು ಜನ ಖಾತೆದಾರರು ಇದ್ದರು ಎಂದು ನನಗೆ ತಿಳಿದಿರುವುದಿಲ್ಲ. ಪ್ರಸ್ತುತ ಪ್ರಕರಣಕ್ಕೆ ಸಂಬಂಧಿಸಿ ಖುದ್ದಾಗಿ ಯಾರಾದರೂ ಖಾತೆದಾರರು ಅಂಚೆ ಇಲಾಖೆಗೆ ದೂರು ನೀಡಿದ್ದರಾ ಎಂದರೆ ಸಾಕ್ಷಿಯು ಹಣದ ದುರುಪಯೋಗ ಮಾಡಿದ ಬಾಬ್ತು ನಾನು ತನಿಖೆಯನ್ನು ಮಾಡದ ಕಾರಣ ಸದರಿ ಮಾಹಿತಿಯು ನನಗೆ ಇದ್ದಿರುವುದಿಲ್ಲ ಎಂದು ನುಡಿಯುತ್ತಾರೆ.

ನಾನು ಚಾ.ಸಾ.1 ರವರ ಕರ್ತವ್ಯವನ್ನು ಮುಂದುವರೆಸಿರುತ್ತೇನೆ ಎಂದರೆ ಸರಿ. ನಾನು ಈ ಪ್ರಕರಣಕ್ಕೆ ಸಂಬಂಧಿಸಿ ನ್ಯಾಯಾಲಯಕ್ಕೆ ಸಾಕ್ಷಿ ನುಡಿಯಲು ಬಂದಿರುತ್ತೇನೆ ಎಂದರೆ ಸರಿ. ಆದ ಕಾರಣ ನಾನು ಹಣದ ದುರುಪಯೋಗದ ತನಿಖೆ ಮಾಡದ ಕಾರಣ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಯಾವೆಲ್ಲಾ ಖಾತೆದಾರರು ಯಾವ ರೀತಿಯ ಖಾತೆಗಳನ್ನು ನಿಖರವಾಗಿ ಹೊಂದಿದ್ದರು ಎಂದು ಹೇಳಲು ಸಾಧ್ಯವೇ

ಎಂದರೆ ಸಾಕ್ಷಿಯು ಅಂಚೆ ಇಲಾಖೆಯಲ್ಲಿ ಬಹಳಷ್ಟು ಜನ ಖಾತೆಗಳನ್ನು ಹೊಂದಿರುವ ಕಾರಣ , ನನಗೆ ಅದರ ಸಂಖ್ಯೆಯನ್ನು ಹೇಳಲು ಕಷ್ಟ ಸಾಧ್ಯ ಎಂದು ನುಡಿಯುತ್ತಾರೆ.

ಗಾಯತ್ರಿ, ದಾಮೋದರ ಪಾಟಾಳಿ, ಜಯರಾಮ ಭಟ್ ಮತ್ತು ವೆಂಕಟೇಶ್ ರವರು ನನಗೆ ದೂರನ್ನು ನೀಡಿರುವುದಿಲ್ಲ , ಕಾರಣ ಸದರಿ ಖಾತೆಯಲ್ಲಿ ಯಾವುದೇ ಹಣದ ದುರುಪಯೋಗವಾಗಿಲ್ಲದೇ ಇದ್ದದ್ದರಿಂದ ಅವರು ನನಗೆ ದೂರನ್ನು ನೀಡಿರುವುದಿಲ್ಲ. ಸದರಿ ಗಾಯತ್ರಿ, ದಾಮೋದರ ಪಾಟಾಳಿ, ಜಯರಾಮ ಭಟ್ ಮತ್ತು ವೆಂಕಟೇಶ್ ರವರನ್ನು ನಾನು ಸಾಕ್ಷಿದಾರರಾಗಿ ತನಿಖಾಧಿಕಾರಿಯವರಿಗೆ ಹೇಳಿರುತ್ತೇನೋ-ಇಲ್ಲವೋ ಎಂದು ನನಗೆ ಈಗ ತಿಳಿದಿರುವುದಿಲ್ಲ. ಸದರಿ ವ್ಯಕ್ತಿಗಳನ್ನು ಆಯ್ಕೆ ಮಾಡಲು ಏನಾದರೂ ವಿಶೇಷ ಕಾರಣವಿತ್ತಾ ಎಂದರೆ ಸಾಕ್ಷಿಯು ನಾವು Randum ಆಗಿ ಆಯ್ಕೆ ಮಾಡಿರುತ್ತೇವೆ ಎಂದು ನುಡಿಯುತ್ತಾರೆ. ಆ ಸಮಯದಲ್ಲಿ ನಮ್ಮ ಇಲಾಖಾ ಮುಖ್ಯಸ್ಥರು ಯಾರಾಗಿದ್ದರು ಎಂದರೆ ಸಾಕ್ಷಿಯು ಈ ಪ್ರಕರಣವಾಗಿ 20 ವರ್ಷಗಳಾಗಿದ್ದ ಕಾರಣ ನನಗೆ ಇದರ ಬಗ್ಗೆ ನೆನಪಿರುವುದಿಲ್ಲ ಎಂದು ನುಡಿಯುತ್ತಾರೆ.

ನನಗೆ ಮೇಲೆ ಹೇಳಿದ ಸಾಕ್ಷಿದಾರರ ಹೆಸರು ಹಾಗೂ ಖಾತೆದಾರರ ಹೆಸರು-ವಿಳಾಸ ತಿಳಿದಿದ್ದು, ನಮ್ಮ ಇಲಾಖಾ ಮುಖ್ಯಸ್ಥರ ಹೆಸರು ತಿಳಿದಿಲ್ಲವೆಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಈ ಪ್ರಕರಣಕ್ಕೆ ಸಂಬಂಧಿಸಿ ಹಿರಿಯ ಅಂಚೆ ಅಧೀಕ್ಷಕರು, ಪುತ್ತೂರು ವಿಭಾಗಕ್ಕೆ ಮಾತ್ರ ಮಾಹಿತಿಯನ್ನು ನಾನು ನೀಡಿರುತ್ತೇನೆ.

ಮರ್ಕಂಜ ಅಂಚೆ ಕಚೇರಿಯಲ್ಲಿ ದಿನವಹಿ ಪುಸ್ತಕವನ್ನು ಯಾರು ನಿರ್ವಹಿಸುತ್ತಿದ್ದರು ಎಂದರೆ ಸಾಕ್ಷಿಯು ಮರ್ಕಂಜ Account office ದೊಡ್ಡತೋಟ ಅಂಚೆ ಕಚೇರಿಯಾಗಿದ್ದು , ಸದರಿ ದಿನವಹಿ ವಹಿವಾಟುಗಳನ್ನು ದೊಡ್ಡತೋಟ ಅಂಚೆ ಕಚೇರಿಯವರು ಪರಿಶೀಲಿಸುತ್ತಿದ್ದರು. ಈ ಪ್ರಕರಣದ ಸಮಯದಲ್ಲಿ ದೊಡ್ಡತೋಟ ಅಂಚೆ ಕಚೇರಿಯ ಮುಖ್ಯಸ್ಥರು ಯಾರು ಆಗಿದ್ದರು ಎಂದು ನನಗೆ ಈಗ ನೆನಪಿರುವುದಿಲ್ಲ. ಈ ಪ್ರಕರಣದಲ್ಲಿ ದೊಡ್ಡತೋಟ ಅಂಚೆ ಕಚೇರಿಯ ಮುಖ್ಯಸ್ಥರನ್ನು ಸಾಕ್ಷಿದಾರರಾಗಿ ಮಾಡಿರುತ್ತಾರೋ–ಇಲ್ಲವೋ ಎಂದು ನನಗೆ ಈಗ ತಿಳಿದಿರುವುದಿಲ್ಲ.

ಚಾ.ಸಾ.1 ಹಾಗೂ ಆರೋಪಿಯ ನಡುವೆ ವೈಷಮ್ಯ ಇರುವುದಿಲ್ಲ. ಚಾ.ಸಾ.1 ಹಾಗೂ ಆರೋಪಿಯ ನಡುವೆ ಅಸಮಾಧಾನ ಇತ್ತೋ–ಇಲ್ಲವೋ ಎಂದು ನನಗೆ ತಿಳಿದಿರುವುದಿಲ್ಲ. ಚಾ.ಸಾ.1 ಹಾಗೂ ಆರೋಪಿಯ ನಡುವೆ ಅಸಮಾಧಾನ ಇಲ್ಲ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನಮ್ಮ ಅಂಚೆ ಕಚೇರಿಯಲ್ಲಿ ಕರ್ತವ್ಯದ ಬಗ್ಗೆ ಇಲಾಖೆಯಲ್ಲಿ movement Register ನ್ನು ನಾವು ನಿರ್ವಹಿಸುತ್ತಿಲ್ಲ. ಆದರೆ ಡೈರಿಯನ್ನು ನಿರ್ವಹಿಸುತ್ತೇವೆ. ಡೈರಿಯು ನಮ್ಮ ಇಲಾಖೆಯ ದಾಖಲೆಯಾಗಿರುತ್ತದೆ ಎಂದರೆ ಸರಿ. ಸದರಿ ಡೈರಿಯಲ್ಲಿ ಕಚೇರಿಯ ಅವಧಿಯ ಕುರಿತು ನಾವು ನಮೂದು ಮಾಡುತ್ತೇವೆ, ಆದರೆ ದಿನಂಪ್ರತಿ ಸದರಿ ಡೈರಿಗೆ ಸಹಿ ಹಾಕುವ ರೂಢಿ ಇರುವುದಿಲ್ಲ. ನಾವು ಕಚೇರಿಯಿಂದ ಹೊರ ಹೋದರೆ ಹಾಗೂ ಕಚೇರಿಗೆ ಬಂದದ್ದನ್ನು ಸದರಿ ಡೈರಿಯಲ್ಲಿ ನಮೂದಿಸುತ್ತೇವೆ.

ನಾನು ಪೊಲೀಸ್ ಠಾಣೆಗೆ ತೆರಳಿದ ನಮ್ಮ ಇಲಾಖಾ ಡೈರಿಯಲ್ಲಿ ನಮೂದು ಮಾಡಿರುತ್ತೇನೋ-ಇಲ್ಲವೋ ಎಂದು ನನಗೆ ಈಗ ನೆನಪಿರುವುದಿಲ್ಲ. ನಮ್ಮ ಇಲಾಖಾ ನಿಯಮದಂತೆ ಕರ್ತವ್ಯದ ಅವಧಿಯಲ್ಲಿ ನಮ್ಮ ಕಚೇರಿಯಿಂದ ಹೊರ ಹೋಗಬೇಕಾದಲ್ಲಿ ಸದರಿ ಡೈರಿಯಲ್ಲಿ ನಮೂದು ಮಾಡಬೇಕು ಎಂದರೆ ಸರಿ. ನಾನು ಸುಳ್ಯ ಪೊಲೀಸ್ ಠಾಣೆಗೆ ಹೋದ ದಿನದಂದು ಕರ್ತವ್ಯದಲ್ಲಿದ್ದ ಬಗ್ಗೆ ತನಿಖಾಧಿಕಾರಿಯವರಿಗೆ ದಾಖಲೆಯನ್ನು ನೀಡಿರುವುದಿಲ್ಲ, ಬದಲಾಗಿ ನಾನು ಪೊಲೀಸ್ ಠಾಣೆಗೆ ಹಾಜರಾಗಿದ್ದ ಕಾರಣ ನಾನು ಪ್ರತ್ಯೇಕವಾಗಿ ದಾಖಲೆಯನ್ನು ನೀಡಿರುವುದಿಲ್ಲ. ನಾನು ಪೊಲೀಸ್ ಠಾಣೆಗೆ ಹೋದ ಬಗ್ಗೆ ನಮ್ಮ ಮೇಲಧಿಕಾರಿಯವರಿಂದ ಅನುಮತಿಯನ್ನು ಪಡೆದುಕೊಳ್ಳುವ ಅವಶ್ಯಕತೆ ಇಲ್ಲದ ಕಾರಣ ನಾನು ಮೇಲಧಿಕಾರಿಯವರಿಂದ ಅನುಮತಿಯನ್ನು ಪಡೆದುಕೊಂಡಿರುವುದಿಲ್ಲ.

ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ದಾಖಲೆಗಳು ಖಾತೆದಾರರ ಸ್ವಾಧೀನದಲ್ಲಿತ್ತು. ಪ್ರಸ್ತುತ ಪ್ರಕರಣಕ್ಕೆ ಸಂಬಂಧಿಸಿದಂತೆ ಪಾಸ್ ಪುಸ್ತಕಗಳು ಖಾತೆದಾರರ ಬಳಿ ಇತ್ತು. ಈ ಬಗ್ಗೆ ನಾವು ಯಾವುದೇ ರಿಜಿಸ್ಟರನ್ನು ನಿರ್ವಹಿಸುವುದಿಲ್ಲ ಕಾರಣ ಪಾಸ್ ಪುಸ್ತಕಗಳು ಖಾತೆದಾರರ ಬಳಿಯೇ ಇರಬೇಕಾಗುತ್ತದೆ. ನಾನು ಪಾಸ್ ಪುಸ್ತಕಗಳನ್ನು ಪೊಲೀಸರಿಗೆ ನೀಡುವ ಪೂರ್ವದಲ್ಲಿ ನಿಖರವಾಗಿ ಎಷ್ಟು ದಿನಗಳ ಹಿಂದೆ ನಾನು ಖಾತೆದಾರರಿಂದ ಪಾಸ್ ಪುಸ್ತಕಗಳನ್ನು ಪಡೆದಿರುತ್ತೇನೆಂದು ನೆನಪಿರುವುದಿಲ್ಲ.

ಪೊಲೀಸರಿಗೆ ಪಾಸ್ ಪುಸ್ತಕಗಳನ್ನು ನೀಡುವ 2-3 ದಿನಗಳ ಹಿಂದೆ ಸದರಿ ಖಾತೆದಾರರಿಂದ ನಾನು ಪಾಸ್ ಪುಸ್ತಕಗಳನ್ನು ಪಡೆದುಕೊಂಡಿರಬಹುದು ಎಂದು ಸಾಕ್ಷಿ ನುಡಿಯುತ್ತಾರೆ. ಸದರಿ ಪಾಸ್ ಪುಸ್ತಕಗಳನ್ನು ಸಂಬಂಧಪಟ್ಟ ಪೋಸ್ಟ್ ಮಾಸ್ಟರಿಗೆ , Account Office ನ ಪೋಸ್ಟ್ ಮಾಸ್ಟರಿಗೆ, ತಪಾಸಣೆಗೆ ಹೋದ ಅಧಿಕಾರಿಗಳಿಗೆ ಪರಿಶೀಲಿಸುವ ಅಧಿಕಾರ ಇರುತ್ತದೆ. ಆ ಸಮಯದಲ್ಲಿ ತಪಾಸಣೆಗೆ ಹೋದ ಅಧಿಕಾರಿಯು ಚಾ.ಸಾ.1 ರವರಾಗಿದ್ದು, ಪೋಸ್ಟ್ ಮಾಸ್ಟರ್ ಹಾಗೂ Account Office ನ ಪೋಸ್ಟ್ ಮಾಸ್ಟರ್ ಯಾರಾಗಿದ್ದರು ಎಂದು ನನಗೆ ಈಗ ನೆನಪಿರುವುದಿಲ್ಲ.

ಪೊಲೀಸರಿಗೆ ಪಾಸ್ ಪುಸ್ತಕಗಳನ್ನು ನೀಡುವ 2-3 ದಿನಗಳ ಹಿಂದೆ ಸದರಿ ಖಾತೆದಾರರಿಂದ ನಾನು ಪಾಸ್ ಪುಸ್ತಕಗಳನ್ನು ಪಡೆದುಕೊಂಡಿದ್ದು, ಅದು ನನ್ನ ಬಳಿಯೇ ಇತ್ತು. ಚಾ.ಸಾ.1 ರವರ ಬಳಿ ಸದರಿ ಪಾಸ್ ಪುಸ್ತಕಗಳು ಇದ್ದಿರಲಿಲ್ಲ.

ಪ್ರಸ್ತುತ ಪ್ರಕರಣಕ್ಕೆ ಸಂಬಂಧಿಸಿ ಚಾ.ಸಾ.1 ರವರು ನನಗೆ ಯಾವುದೇ ಮಾಹಿತಿಯನ್ನು ನೀಡಿರುವುದಿಲ್ಲ. ನಾನು ಸುಳ್ಯ ಪೊಲೀಸ್ ಠಾಣೆಗೆ ಹೋದಾಗ ಅಲ್ಲಿ ಚಾ.ಸಾ.6 ಹಾಗೂ ಚಾ.ಸಾ.9 ರವರು ಹಾಜರಿದ್ದರು. ಚಾ.ಸಾ.6 ಹಾಗೂ ಚಾ.ಸಾ.9 ಗಳನ್ನು ಯಾರು ಪೊಲೀಸ್ ಠಾಣೆಗೆ ಬರಲು ಹೇಳಿದ್ದರು ಎಂದು ನನಗೆ ತಿಳಿದಿರುವುದಿಲ್ಲ.

ನಾನು ಸುಳ್ಯ ಪೊಲೀಸ್ ಠಾಣೆಗೆ ಹೋದಾಗ ಕಡತಗಳು ತಯಾರಾಗಿರಲಿಲ್ಲ. ನಾನು ಖಾತೆದಾರರ ಪಾಸ್ ಪುಸ್ತಕಗಳನ್ನು ಠಾಣಾಧಿಕಾರಿಯವರಿಗೆ ಹಸ್ತಾಂತರಿಸುವಾಗ

ಅವರು ಮಹಜರು ಮುಖೇನ ಸ್ವೀಕರಿಸಿಕೊಂಡಿರುತ್ತಾರೆ. ಸ್ವತ್ತು ಸ್ವಾಧೀನತಾ ಮಹಜರನ್ನು ಯಾರು ಬರೆದಿದ್ದರು ಎಂದು ನನಗೆ ನಿಖರವಾಗಿ ಅವರ ಹೆಸರು ನೆನಪಿರುವುದಿಲ್ಲ, ಆದರೆ ಚಾ.ಸಾ.11 ರವರು ಬರೆದದ್ದಾಗಿರಬಹುದು. ನಿಪಿ-25 ರ ದಾಖಲೆಗೆ ಮೊದಲು ನಾನು ಸಹಿ ಮಾಡಿರುತ್ತೇನೆ. ನಿಪಿ-25 ರ ದಾಖಲೆಗೆ ನಾನು ಸಹಿ ಮಾಡಿದ ನಂತರ ಚಾ.ಸಾ.6 ಹಾಗೂ ಚಾ.ಸಾ.9 ರವರು ಸಹಿಗಳನ್ನು ಹಾಕಿರುತ್ತಾರೆ. ಚಾ.ಸಾ.6 ಹಾಗೂ ಚಾ.ಸಾ.9 ರವರಿಗೆ ನಿಪಿ-25 ರಲ್ಲಿರುವ ವಿಚಾರಗಳನ್ನು ನಾನು ಓದಿ ಹೇಳಿರುವುದಿಲ್ಲ, ಬದಲಾಗಿ ಠಾಣಾಧಿಕಾರಿಯವರು ಓದಿ ಹೇಳಿರುತ್ತಾರೆ.

ನಿಪಿ-25 ರ ಸಮಯದಲ್ಲಿ ನಾನು ಪೊಲೀಸ್ ಠಾಣೆಯಲ್ಲಿ ನಿಪಿ-25 ರ ದಾಖಲೆಗೆ ಒಂದು ಸಹಿಯನ್ನು ಮಾಡಿರುತ್ತೇನೆ. ಈ ಪ್ರಕರಣಕ್ಕೆ ಸಂಬಂಧಿಸಿ ಅಂಚೆ ಕಚೇರಿಯಲ್ಲಿ ನಾನು ಎಷ್ಟು ಸಹಿಗಳನ್ನು ಮಾಡಿರುತ್ತೇನೆಂದು ನನಗೆ ಹೇಳಲು ಬರುವುದಿಲ್ಲ.

ನನಗೆ ಪೊಲೀಸರು ಯಾವುದೇ ನೋಟೀಸನ್ನು ನೀಡಿದ್ದೂ ಇಲ್ಲ , ನಾನು ಪೊಲೀಸ್ ಠಾಣೆಗೆ ಹೋದದ್ದೂ ಇಲ್ಲ ಎಂದರೆ ಸರಿಯಲ್ಲ. ಚಾ.ಸಾ.1 ರವರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಆರೋಪಿಯು ಮರ್ಕಂಜ ಅಂಚೆ ಕಚೇರಿಯಲ್ಲಿ 2002 ರಿಂದ 2004 ರವರೆಗೆ ಕರ್ತವ್ಯದಲ್ಲಿದ್ದರು. ಆರೋಪಿಯು ಸೇವೆಯಲ್ಲಿದ್ದ ಎಲ್ಲಾ ಅವಧಿಗಳಲ್ಲಿ ಕರ್ತವ್ಯವನ್ನು ನಿರ್ವಹಿಸಿದ್ದಾರೋ-ಇಲ್ಲವೋ ಎಂದು ನಾನು ಪರಿಶೀಲನೆಗೈದಿರುವುದಿಲ್ಲ. ದಿನಾಂಕ 12-10-2002 ರಿಂದ ದಿನಾಂಕ 04-02-2004 ರವರೆಗೆ ಆರೋಪಿ ನನ್ನ ಸಮಕ್ಷಮದಲ್ಲಿ ಯಾವುದಾದರೂ ಕೈ ಬರಹಗಳನ್ನಾಗಲೀ, ಸಹಿಯನ್ನಾಗಲೀ ಮಾಡಿದ್ದು ಇಲ್ಲ. ನನಗೆ ಈ ಬಗ್ಗೆ ಯಾವುದೇ ಖುದ್ದಾದ ವೈಯಕ್ತಿಕ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ಚಾ.ಸಾ.1 ರವರವರ ಅವಧಿಯಲ್ಲಿ ಬರೆದಂತಹ ಪಾಸ್ ಪುಸ್ತಕಗಳನ್ನು ಹಾಜರುಪಡಿಸಿದ ಹೊರತು ನನಗೆ ಖುದ್ದಾಗಿ ಆರೋಪಿಯ ಕೈ ಬರಹದ ಹಾಗೂ ಸಹಿಯ ಬಗ್ಗೆ ಯಾವುದೇ ಮಾಹಿತಿ ಇದ್ದಿರುವುದಿಲ್ಲ ಎಂದರೆ ಸರಿಯಲ್ಲ.

ಆರೋಪಿಯು ಮರ್ಕಂಜ ಅಂಚೆ ಕಚೇರಿಯಲ್ಲಿ ಸೇವೆ ಸಲ್ಲಿಸುವ ಪೂರ್ವದಲ್ಲಿ ಆರೋಪಿಯ ತಂದೆಯು ಸದರಿ ಅಂಚೆ ಕಚೇರಿಯಲ್ಲಿ ಸೇವೆ ಸಲ್ಲಿಸಿದ ಬಗ್ಗೆ ನನಗೆ ತಿಳಿದಿರುವುದಿಲ್ಲ. ಆರೋಪಿಯ ತಂದೆಯ ಕೆಲಸವನ್ನು ಆರೋಪಿಯು ಮುಂದುವರಿಸಿಕೊಂಡು ಹೋಗುತ್ತಿದ್ದರು ಎಂದು ನನಗೆ ಮಾಹಿತಿ ಇದ್ದಿರುವುದಿಲ್ಲ. ಆರೋಪಿಯ ಖಾಯಂ ಕೆಲಸವನ್ನು ತಪ್ಪಿಸುವ ಸಲುವಾಗಿ ಚಾ.ಸಾ.1 ರವರು ನೀಡಿದ ಸುಳ್ಳು ಪ್ರಕರಣಕ್ಕೆ ಪೂರಕವಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಒಂದು ವೇಳೆ ಹಣದ ದುರುಪಯೋಗವಾಗಿದ್ದರೆ ಖಾತೆದಾರರು ನನಗೆ ದೂರನ್ನು

ನೀಡಬೇಕಾಗಿತ್ತು ಎಂದರೆ ಸಾಕ್ಷಿಯು ನನಗೆ ಆ ಬಗ್ಗೆ ಮಾಹಿತಿ ಇರುವುದಿಲ್ಲ ಎಂದು ನುಡಿಯುತ್ತಾರೆ.

ಪಾಸ್ ಪುಸ್ತಕಗಳನ್ನು ಹೊಂದಿದ ಮೇಲೆ ಹೇಳಿದ ಖಾತೆದಾರರಾಗಲೀ, ಸಾಕ್ಷಿದಾರರಾಗಲೀ ಖುದ್ದಾಗಿ ಪೊಲೀಸ್ ಠಾಣೆಗೆ ಯಾವುದೇ ಪಿರ್ಯಾದಿಯನ್ನು ನೀಡಿರುವುದಿಲ್ಲ ಎಂದರೆ ಸಾಕ್ಷಿಯು ಸಾಕ್ಷಿ ಪಟ್ಟಿಯಲ್ಲಿದ್ದ ಸಾಕ್ಷಿದಾರರು ಪಿರ್ಯಾದಿ ನೀಡಿರುತ್ತಾರೋ-ಇಲ್ಲವೋ ಎಂಬ ಬಗ್ಗೆ ನನಗೆ ತಿಳಿದಿರುವುದಿಲ್ಲ, ಆದರೆ ಸದರಿ ಪಾಸ್ ಪುಸ್ತಕದ ಖಾತೆದಾರರು ಯಾವುದೇ ಪಿರ್ಯಾದಿಯನ್ನು ನೀಡಿರುವುದಿಲ್ಲ. ನಾನು ಚಾ.ಸಾ.1 ರವರ ಕೆಲಸವನ್ನು ಮುಂದುವರಿಸಿರುವ ಕಾರಣ ಚಾ.ಸಾ.1 ರವರು ಸುಳ್ಳು ಪ್ರಕರಣವನ್ನು ಹೂಡಿದ್ದರೆಂದು ನನಗೆ ತಿಳಿದಿದ್ದರೂ ಸಹ ಚಾ.ಸಾ.1 ರವರ ಕೇಸನ್ನು ಮುಂದುವರಿಸಿಕೊಂಡು ಹೋಗಿ , ಅವರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಈ ಪ್ರಕರಣದಲ್ಲಿ ಹಾಜರುಪಡಿಸಿದ ಎಲ್ಲಾ ದಾಖಲೆಗಳು ನಾನು ಹಾಗೂ ಚಾ.ಸಾ.1 ರವರು ಸೃಷ್ಟೀಕರಿಸಿದ ದಾಖಲೆಗಳು ಆಗಿರುತ್ತವೆ ಎಂದರೆ ಸರಿಯಲ್ಲ. ಒಂದು ಪಕ್ಷದಲ್ಲಿ ಆರೋಪಿಯಿಂದ ಹಣದ ದುರುಪಯೋಗವಾಗಿದ್ದೇ ಆಗಿದ್ದರೆ ಎಲ್ಲಾ ಖಾತೆದಾರರ ಹೇಳಿಕೆ ಹಾಗೂ ಅವರವರ ಪಾಸ್ ಪುಸ್ತಕಗಳನ್ನು ನಾನು ಪಡೆದುಕೊಳ್ಳುತ್ತಿದ್ದೆ ಎಂದರೆ ಸಾಕ್ಷಿಯು ಯಾವ ಖಾತೆದಾರರಿಗೆ ಹಣದ ದುರುಪಯೋಗವಾಗಿತ್ತೋ ಅಂತಹ ಖಾತೆದಾರರ ಹೇಳಿಕೆ ಹಾಗೂ ಪಾಸ್

ಪುಸ್ತಕಗಳನ್ನು ಹಿಂದಿನ ತನಿಖಾಧಿಕಾರಿಯವರು ಪಡೆದುಕೊಂಡಿರುತ್ತಾರೆ ಎಂದು ನುಡಿಯುತ್ತಾರೆ.

ಮೇಲೆ ಹೇಳಿದ ನಾಲ್ಕು ಪಾಸ್ ಪುಸ್ತಕಗಳನ್ನು ಹೊಂದಿದ ಖಾತೆದಾರರ ಪೈಕಿ ಎಷ್ಟು ಖಾತೆದಾರರಿಗೆ ತೊಂದರೆಯಾಗಿತ್ತು ಎಂದರೆ ಸಾಕ್ಷಿಯು ಹಿಂದಿನ ತನಿಖಾಧಿಕಾರಿಯವರು ತನಿಖೆಯನ್ನು ಮಾಡಿದ ಕಾರಣ ಎಷ್ಟು ಖಾತೆದಾರರಿಗೆ ತೊಂದರೆಯಾಗಿತ್ತು ಎಂದು ನನಗೆ ಹೇಳಲು ಬರುವುದಿಲ್ಲ. ನಾನು ಚಾ.ಸಾ.1 ರವರ ಕರ್ತವ್ಯವನ್ನು ಮುಂದುವರಿಸಿಕೊಂಡು ಹೋಗಿರುವ ಕಾರಣ, ಯಾವೆಲ್ಲಾ ಖಾತೆದಾರರಿಗೆ ತೊಂದರೆಯಾಗಿತ್ತು ತಿಳಿದುಕೊಳ್ಳುವ ಅಧಿಕಾರ ನನಗೆ ಇತ್ತು ಎಂದರೆ ಸಾಕ್ಷಿಯು ತಿಳಿದುಕೊಳ್ಳುವ ಅವಶ್ಯಕತೆ ನನಗೆ ಇದ್ದಿರಲಿಲ್ಲ ಎಂದು ನುಡಿಯುತ್ತಾರೆ.

ಸಾರ್ವಜನಿಕರಿಗೆ ಆರೋಪಿಯಿಂದ ಯಾವುದೇ ತೊಂದರೆಯಾಗಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-25 ರ ದಾಖಲೆಯು ನನ್ನ ಸಮಕ್ಷಮದಲ್ಲಿ ಆಗಿರುವುದಿಲ್ಲ ಎಂದರೆ ಸರಿಯಲ್ಲ. ಪೊಲೀಸರು ತಯಾರಿಸಿದ ದಾಖಲೆಗೆ ನಾನು ಸಹಿಯನ್ನು ಹಾಕಿರುತ್ತೇನೆ ಎಂದರೆ ಸರಿಯಲ್ಲ. ನಾನು ಸುಳ್ಯ ಪೊಲೀಸ್ ಠಾಣೆ ಹೋದದ್ದು ಇಲ್ಲ ಎಂದರೆ ಸರಿಯಲ್ಲ. ನಾನು ಹೇಳುವ ಆರೋಪಿಗೂ ಈ ಪ್ರಕರಣಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಆರೋಪಿಯಿಂದ ಯಾವುದೇ ಹಣ ದುರುಪಯೋಗವಾಗಿದ್ದು ಇಲ್ಲ ಎಂದರೆ ಸರಿಯಲ್ಲ. ನಾನು ಈಗಲೂ ಸಹ ಚಾ.ಸಾ.1

ರವರ ನಿರ್ದೇಶನದ ಪ್ರಕಾರ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯು ಯಾವುದೇ ತಪ್ಪನ್ನು ಮಾಡಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇಲ್ಲ.

ನನ್ನ ಉಕ್ತಲೇಖನದ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸರಿ ಇದೆ ಎಂದು ಒಪ್ಪಿರುತ್ತಾರೆ.

ಸಾಕ್ಷಿಯ ಸಹಿ

ವ್ಯವಹಾರಿಕ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾಯಿಕ ದಂಡಾಧಿಕಾರಿಯವರು, ಸುಳ್ಯ, ದ.ಕ.